1

## ಮೂಲ ವಾಕ್ಯ: ಲೂಕ 22:19

# ಕರ್ತನ ಭೋಜನದ ಅರ್ಥ (1)

ನನ್ನ ಕುಟುಂಬವು ಆರಾಧನೆಗೆ ಸೇರಿ ಬರುತ್ತಿದ್ದ ಸಭೆಯಲ್ಲಿ ಪ್ರತಿ ಭಾನುವಾರವು ಕರ್ತನ ಭೋಜನದಲ್ಲಿ ಪಾಲುದಾರರಾಗುತ್ತಿದ್ದರು. ಅದರಲ್ಲಿ ಪಾಲುದಾರರಾಗುತ್ತಿದ್ದ ತನ್ನ ತಾಯಿಯನ್ನು ನಾನು ನೆನಪುಮಾಡಿಕೊಳ್ಳುತ್ತೇನೆ. ಆ ಸಮಯದಲ್ಲಿ ನನ್ನ ತಂದೆಗೆ ದೀಕ್ಷಾಸ್ನಾನವಾಗದೆ ಇದ್ದದ್ದರಿಂದ ಅವರು ಕರ್ತನ ಭೋಜನದಲ್ಲಿ ಪಾಲುದಾರರಾಗುತ್ತಿರಲಿಲ್ಲ. ರೊಟ್ಟಿ ಮತ್ತು ದ್ರಾಕ್ಷಾರಸವನ್ನು ತಂದೆಯಿಂದ ತಪ್ಪಿಸಿ ಮುಂದೆ ನೀಡುವಾಗ, “ಅಮ್ಮ ನೀನು ಏನನ್ನು ತಿನ್ನುತ್ತಿರುವಿ? ನೀನು ಏನು ಮಾಡುತ್ತಿರುವಿ? ತಂದೆ ಏಕೆ ಅದನ್ನು ತಿನ್ನಲಿಲ್ಲ? ನಾನು ಏಕೆ ತಿನ್ನಬಾರದು? ನೀನು ಏನನ್ನು ಕುಡಿಯುತ್ತಿರುವಿ? ಅದರಲ್ಲಿ ನಾನು ಯಾವಾಗ ಪಾಲುದಾರನಾಗಬಹುದು?” ಎಂಬ ಪ್ರಶ್ನೆಗಳನ್ನು ನಾನು ಕೇಳುತ್ತಿದ್ದೆ.

ನಿನ್ನ ಬಾಯನ್ನು ಮುಚ್ಚು, ನಾನು ಮನೆಗೆ ಬಂದು, “ಆ ವಿಷಯವನ್ನು ... ನಿನಗೆ ತಿಳಿಸುವೆನು” ಎಂದು ಹೇಳುತ್ತಿದ್ದರು.

ವಯಸ್ಕರು ಅವುಗಳನ್ನು ತೆಗೆದುಕೊಳ್ಳುವಾಗ, ಅವರಲ್ಲಿದ್ದ ಧನ್ಯತಾಭಾವವನ್ನು ನಾನು ಗಮನಿಸಿದ್ದೆ. ಅವರು ತಮ್ಮ ತಲೆಗಳನ್ನು ಬಾಗಿ, ಕಣ್ಣುಗಳನ್ನು ಮುಚ್ಚಿ ಧ್ಯಾನಭಾವದಿಂದ ರೊಟ್ಟಿ ಮತ್ತು ದ್ರಾಕ್ಷಾರಸವನ್ನು ತೆಗೆದುಕೊಳ್ಳುತ್ತಿದ್ದರು. ಅವರ ಯೋಜನೆ ಹಾಗೂ ಭಾವಗಳು ಗಂಭೀರ ಪರಿಸ್ಥಿತಿಯಲ್ಲಿದ್ದವು.

ಈ ಧನ್ಯತಾಭವವನ್ನು ನಾನು ಗಮನಿಸಿದ್ದರಿಂದ, ನಾನು ಸಹ ಕರ್ತನ ಭೋಜನದಲ್ಲಿ ಪಾಲುದಾರನಾಗುವ ಸಮಯಕ್ಕಾಗಿ ಹಾತೊರೆಯುತ್ತಿದ್ದೆ. ಅದರಲ್ಲಿದ್ದ ಅರ್ಥ ಹಾಗೂ ಉದ್ದೇಶ ವನ್ನು ಅರಿಯಲು ಆಸಕ್ತನಾಗಿದ್ದೆ.

ಈಗ ನಾನು ಹಿರಿಯನಾಗಿದ್ದು, ದೇವರ ವಾಕ್ಯದಲ್ಲಿ ನೀಡಿರುವ ಕರ್ತನ ಭೋಜನದ ಕುರಿತಾದ ಅರ್ಥ ಹಾಗೂ ಮಹತ್ವವನ್ನು ಅರಿಯುವ ಕಾರ್ಯವನ್ನು ಮಾಡಿರುವೆನು.

### ನಾವು ಕ್ರಿಸ್ತನನ್ನೇ ನೆನಪುಮಾಡುತ್ತೇವೆ

ಕರ್ತನ ಭೋಜನವು ಯೇಸುವಿನ ಹಾಗೂ ಆತನ ಕ್ರೂಜೆಯ ಸುತ್ತಲಿನ ಸಕಲ ಕ್ರೈಸ್ತತ್ವವನ್ನು ಹೆಣೆದಿರುತ್ತದೆ (1 ಕೊರಿಂಥ 2:1, 2). ಪೌಲನು ಬರೆದು,

> ನಾನು ನಿಮಗೆ ತಿಳಿಸಿದ ಮೊದಲನೆಯ ಸಂಗತಿಗಳೊಳಗೆ ಒಂದು ಸಂಗತಿಯನ್ನು ನಿಮಗೆ ತಿಳಿಸಿಕೊಟ್ಟೆನು. ಅದು ನಾನು ಸಹ ಕಲಿತುಕೊಂಡದ್ದೇ. ಅದೇನಂದರೆ ಶಾಸ್ತ್ರದಲ್ಲಿ ಮುಂತಿಳಿಸಿರುವ ಪ್ರಕಾರ ಕ್ರಿಸ್ತನು ನಮ್ಮ ಪಾಪಗಳ ನಿವಾರಣೆಗಾಗಿ ಸತ್ತನು; ಹೂಣಲ್ಪಟ್ಟನು; ಶಾಸ್ತ್ರದ ಪ್ರಕಾರವೇ ಮೂರನೆಯ ದಿನದಲ್ಲಿ ಎಬ್ಬಿಸಲ್ಪಟ್ಟನು (1 ಕೊರಿಂಥ 15:3, 4).

ಯೇಸುವಿನ ಮರಣ ಪುನರುತ್ಥಾನ ಹಾಗೂ ಆತನ ಬರುವಿಕೆಯನ್ನು ನೆನಪು ಮಾಡ ಬೇಕೆಂದು ಯೇಸು ಭೋಜನದ ಸಂಸ್ಕಾರವನ್ನು ಕ್ರೈಸ್ತರಿಗೆ ನೀಡಿರುವನು. ಇದನ್ನು ಆಗಾಗ್ಗೆ ನೆನಪು ಮಾಡಬೇಕು, ಏಕಂದರೆ ನಂಬಿಕೆಯು ಅದನ್ನು ಅವಲಂಭಿಸಿದೆ. ಅವುಗಳಿಂದ ಕ್ರೈಸ್ತ ಜೀವಿತಕ್ಕೆ ಅರ್ಥವುಂಟಾಗುತ್ತದೆ.

ಯೇಸುವಿನ ಮರಣದಿಂದ ನಮ್ಮ ಪಾಪಗಳು ಪರಿಹಾರವಾಗಿದ್ದು (ಪ್ರಕಟನೆ 1:5) ಮತ್ತು ಆತನೊಂದಿಗೆ ಪರಲೋಕದ ನಿರೀಕ್ಷೆಯನ್ನು ಹೊಂದಿದ್ದೇವೆ (1 ಕೊರಿಂಥ 15:22-24; 1 ಪೇತ್ರ 1:3, 4). ಆತನ ಪುನರುತ್ಥಾನದ ಮೂಲಕ ನಾವು ಸಹ ಪುನರುತ್ಥಾನದ ನಿರೀಕ್ಷೆಯನ್ನು ಹೊಂದಿದ್ದೇವೆ (1 ಕೊರಿಂಥ 15:14, 17). ಕರ್ತನ ಭೋಜನದಲ್ಲಿ ಈ ಸತ್ಯಾಂಶಗಳನ್ನು ಧ್ಯಾನಿಸುತ್ತೇವೆ.

ಪಸ್ಕದ ಕುರಿಯಲ್ಲೂ ಹಾಗೂ ಇಸ್ರಾಯೇಲ್ಯರು ಸಮರ್ಪಿಸಿದ ಪಾಪ ಪರಿಹಾರಕ ಕಾಣಿಕೆಯಲ್ಲೂ, ಯೇಸುವಿನ ಯಜ್ಞವನ್ನು ಮುಂತಿಳಿಸಲಾಗಿದೆ (1 ಕೊರಿಂಥ 5:7; ಇಬ್ರಿಯ 10:1). ಆತನು ಕುರಿಮರಿಯಾಗಿದ್ದ, ತನ್ನ ರಕ್ತದ ಮೂಲಕ ಮನುಷ್ಯರೆಲ್ಲರಿಗೆ ಪಾಪ ವಿಮೋಚನೆಯನ್ನು ಮಾಡಿದ್ದಾನೆ, ಯಾಕಂದರೆ ರಕ್ತಧಾರೆಯಿಲ್ಲದೆ ಪಾಪ ನಿವಾರಣೆ ಇರುವದಿಲ್ಲ (ಇಬ್ರಿಯ 9:22).

ವೇದನೆಗೊಳಗಾದ ರಕ್ಷಕನು, ಭೂಮಿಗೆ ಇಳಿದು ಬಂದು ನಿಮಗಾಗಿ ಯಜ್ಞವಾದನು ಎಂದು ಯೆಶಾಯನ್ನು ಚಿತ್ರಿಸಿರುವನು:

> ನಮ್ಮ ದ್ರೋಹಗಳ ದೆಸೆಯಿಂದ ಅವನಿಗೆ ಗಾಯವಾಯಿತು,
> ನಮ್ಮ ಅಪರಾಧಗಳ ನಿಮಿತ್ತ ಅವನ ಜಜ್ಜಲ್ಪಟ್ಟನು;
> ನಮಗೆ ಸುಶಾಂತಿಯನ್ನುಂಟುಮಾಡುವ ದಂಡನೇ ಯನ್ನು ಅವನು ಅನುಭವಿಸಿದನು;
> ಅವನ ಬಾಸುಂಡೆಗಳಿಂದ ನಮಗೆ ಗುಣವಾಯಿತು (53:5).

> ... ತನ್ನ ಪ್ರಾಣವನ್ನು ಧಾರೆಯೆರೆಂದು ಮರಣಹೊಂದಿ ಬಹು ಜನ ದ್ರೋಹಿಗಳೊಂದಿಗೆ ತನ್ನನ್ನೂ ಎಣಿಸಿಕೊಂಡು ಬಹು ಜನ ದ್ರೋಹಿಗಳ ಪಾಪವನ್ನು ಹೊರುತ್ತಾ ಅವರಿಗಾಗಿ ವಿಜ್ಞಾಪನೆಮಾಡಿದನಲ್ಲಾ (53:12).

ಕರ್ತನ ಭೋಜನದ ಆಚರಣೆಯ ಮೂಲಕ ಯೇಸುವಿನ ಮಣವು ಪ್ರಚುರವಾಗಿದೆ. ಅದರಲ್ಲಿ ಪಾಲುಗಾರರಾಗಿ, ಆತನ ರಕ್ತ ಹಾಗೂ ದೇಹದಲ್ಲಿ ಧ್ಯಾನ ಮಾಡುತ್ತೇವೆ. ಪುನರುತ್ಥಾನ ಹೊಂದಿದ ನಮ್ಮ ರಕ್ಷಕನು, ನಮ್ಮ ಪಾಪಗಳಿಗಾಗಿ ಯಜ್ಞವಾಗಿ, ಮರಣವನ್ನು ಹೊಂದಿರುವದರಿಂದ ದೇವರಿಗೆ ನಾವು ಕೃತಜ್ಞತೆ ಹೇಳುತ್ತೇವೆ. ಆತನು ಈಗ ನಮಗಾಗಿ ಪರಲೋಕದಲ್ಲಿದ್ದಾನೆ.